ದಿನಾಂಕಃ 25.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ.ಟಿ.ಡಿ., ವಕೀಲರಿಂದ 1 ನೇ ಆರೋಪಿ ಪರವಾಗಿ

19. ಲಿಂಗದಹಳ್ಳಿ ಪೆಟ್ರೋಲ್ ಬಂಕ್ ಇರುವ ಸ್ಥಳ ಒಂದು ಜನ ನಿಬಿಡ ಸ್ಥಳವಾಗಿದೆ. ಅಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ. ಅಂದು ನಾವು ಬೇರೆ ಯಾವುದೇ ವಾಹನಗಳನ್ನು ನಿಲ್ಲಿಸಿ ತಪಾಸಣೆ ಮಾಡಿರುವುದಿಲ್ಲ. ನಮ್ಮ ಇಲಾಖೆಯ ವಸತಿಗೃಹಗಳು ಅಲ್ಲಿಂದ ಬೀರೂರು ರಸ್ತೆಯಲ್ಲಿವೆ. ಅಲ್ಲಿ ಪೋಲೀಸ್ ಠಾಣೆ ಇದೆ. ನಾನು ತರೀಕೆರೆ ಮುಖ್ಯ ಕಚೇರಿಗೆ ಕರೆ ಮಾಡಿ ಬೈಕು ಬರುತ್ತಿರುವ ವಿಚಾರ ತಿಳಿಸಿರುವುದಿಲ್ಲ. ಲಿಂಗದಹಳ್ಳಿ ಪೆಟ್ರೋಲ್ ಬಂಕ್ ಹತ್ತಿರ ಮತ್ತು ನಿಪಿ.2 ಮಹಜರು ತಯಾರಿಸಿದ ಸ್ಥಳದಲ್ಲಿ ಸ್ವತಂತ್ರ ಪಂಚರನ್ನು ಕರೆಸುವ ಪ್ರಯತ್ನ ಮಾಡಿದ್ದೆವು ಆದರೆ ಯಾರೂ ಸಹಕರಿಸಲಿಲ್ಲ. ಸ್ವತಂತ್ರ ಪಂಚರಾಗಿ ಸಹಕರಿಸುವಂತೆ ನಾವು ಕರೆದವರ ಹೆಸರು ಹೇಳಲಾಗುವುದಿಲ್ಲ.

20. ನಾವು ಲಿಂಗದಹಳ್ಳಿ ಪೆಟ್ರೋಲ್ ಬಂಕ್ ಹತ್ತಿರ ಮದ್ಯಾಹ್ನ 1.00 ಗಂಟೆಯಿಂದ ಆರೋಪಿತರ ದ್ವಿಚಕ್ರ ವಾಹನ ಬರುವವರೆಗೂ ಕಾಯುತ್ತಿದ್ದೆವು. ಲಿಂಗದಹಳ್ಳಿ ಪೆಟ್ರೋಲ್ ಬಂಕ್‌ನಿಂದ ತರೀಕೆರೆ ಕೋಡಿಕ್ಯಾಂಪ್ ಸುಮಾರು 13 ಕಿಮೀ ದೂರ ಇದೆ. 15 ನಿಮಿಷಕ್ಕೆ ನಾವು ಲಿಂಗದಹಳ್ಳಿ ಪೆಟ್ರೋಲ್ ಬಂಕ್‌ನಿಂದ ತರೀಕೆರೆ ಕೋಡಿಕ್ಯಾಂಪ್ ದ್ವಿಚಕ್ರ ವಾಹನದಲ್ಲಿ ಹೋಗಬಹುದು. ನಮ್ಮ ಇಲಾಖೆ ವಾಹನದ ನೋಂದಣಿ ಸಂಖ್ಯೆ ಮಹಜರಿನಲ್ಲಿ ನಮೂದಿಸಿಲ್ಲ.

21. ಆರೋಪಿತರ ಬೈಕಿನಲ್ಲಿದುದು ಈಗ ನ್ಯಾಯಾಲಯದ ಮುಂದಿರುವ ಬ್ಯಾಗು ಆಗಿದೆ. ಮು.ಮಾ.1 ತುಂಬಿರುವ ಬ್ಯಾಗು ಬಿಳಿ ಬಣ್ಣದ್ದು ಅಲ್ಲ ಎಂದರೆ ಸರಿಯಲ್ಲ. ಮು.ಮಾ.1 ತುಂಬಿರುವ ಬ್ಯಾಗಿನಲ್ಲಿ ಬೇರೆ ಬಣ್ಣದ ಅಚ್ಚುಗಳಿವೆ ಎಂದರೆ ಸರಿಯಲ್ಲ. ಬಿಳಿಯ

ಬ್ಯಾಗಿನಲ್ಲಿ ಮು.ಮಾ.1 ನ್ನು ತುಂಬಿಸಲಾಗಿತ್ತು ಎಂದು ನಿಪಿ.2 ಮಹಜರಿನಲ್ಲಿ ಬರೆದಿಲ್ಲ ಎಂದರೆ ನಿಜ.

21. ನಾನು ತರೀಕೆರೆ ಕೋಡಿಕ್ಯಾಂಪಿಗೆ ಬಂದಾಗ ಮದ್ಯಾಹ್ನ 3.00 ಗಂಟೆಯಾಗಿರಬಹುದು. ತರೀಕೆರೆ ಕೋಡಿಕ್ಯಾಂಪ್ ಏರಿಯಾ ಒಂದು ಜನ ನಿಬಿಡ ಸ್ಥಳವಾಗಿದೆ. ನಾವು ಬೈಕನ್ನು ಬೆನ್ನಟ್ಟಿ ಹೋಗುವಾಗ ಬೈಕಿನ ನಂಬರು ಗೊತ್ತಿರಲಿಲ್ಲ. ಕೋಡಿಕ್ಯಾಂಪ್ ನಾಲ್ಕನೇ ತಿರುವಿನಲ್ಲಿ ಸಾಕಷ್ಟು ದ್ವಿಚಕ್ರವಾಹನಗಳು ನಿಂತಿದ್ದವು. ನಿಪಿ.2 ಮಹಜರಿನಲ್ಲಿ ಆರೋಪಿತರು ಯಾವುದೋ ಒಂದು ಮನೆಯ ಮುಂದೆ ಬೈಕು ನಿಲ್ಲಿಸಿ ಓಡಿಹೋಗಿದ್ದು ಕಂಡುಬಂತು ಎಂದು ಬರೆದಿದ್ದೇವೆ.

22. ಸದರಿ ಬೈಕು ನಿಲ್ಲಿಸಿರುವ ಮನೆಗೆ ಬೀಗ ಹಾಕಿತ್ತು ಎಂದು ನಿಪಿ.2 ರಲ್ಲಿ ನಮೂದಿಸಿದ್ದೇನೆ. ನಾವು ಸದರಿ ಮನೆಗೆ ಹಿಂದಿನ ಬಾಗಿಲಿನಿಂದ ಪ್ರವೇಶಿಸಿದ್ದೆವು. ಮನೆಯ ಮುಂದಿನ ಬೀಗವನ್ನು ಕೊನೆಯವರೆಗೂ ನಾವು ತೆರೆದಿರಲಿಲ್ಲ. ನಮ್ಮ ಸಿಬ್ಬಂದಿಯ ಪೈಕಿ ನೆಲಮಾಳಿಗೆಗೆ ಯಾರು ಇಳಿದರು ಎಂದು ನಿಪಿ.2 ರಲ್ಲಿ ನಮೂದಿಸಿಲ್ಲ. ತರೀಕೆರೆ ಕಚೇರಿಗೆ ನಾನು ಸ್ವತಂತ್ರ ಸಾಕ್ಷಿದಾರರು ಸ್ಥಳದಲ್ಲಿ ಸಹಕರಿಸುವುದಿಲ್ಲ, ತರೀಕೆರೆಯಿಂದ ಸ್ವತಂತ್ರ ಸಾಕ್ಷಿದಾರರನ್ನು ಕರೆದುಕೊಂಡು ಬನ್ನಿ ಎಂದು ಹೇಳಿರುವುದಿಲ್ಲ.

23. ನಾವು ಮುದ್ದೆಮಾಲು ಜಪ್ತು ಮಾಡಿದ ಮನೆ 1 ನೇ ಆರೋಪಿಗೆ ಸೇರಿದ್ದು ಎಂದು ನನಗೆ ದಾಳಿ ನಡೆಸಿದಾಗ ಗೊತ್ತಾಯಿತು. ಅದಕ್ಕಿಂತ ಮೊದಲು ಗೊತ್ತಿರಲಿಲ್ಲ. 2 ಮತ್ತು 3 ನೇ ಆರೋಪಿತರು ಹಾಗೂ ಅಕ್ಕಪಕ್ಕದವರು ಸದರಿ ಮನೆ 1 ನೇ ಆರೋಪಿಗೆ ಸೇರಿದ್ದು ಎಂದು ತಿಳಿಸಿದ್ದರು. ಅಕ್ಕಪಕ್ಕದವರು ಯಾರು ತಿಳಿಸಿದ್ದರು ಎಂದು ಅಕ್ಕಪಕ್ಕದವರ ಹೆಸರು ಹೇಳಲಾಗುವುದಿಲ್ಲ.

24. ಮಹಜರು ತಯಾರಿಸುವ ಮುಂಚೆ ಯಾವುದೇ ವರದಿ ತಯಾರಿಸಿ ಆರ್.ಎಫ್.ಒ. ರವರಿಗೆ ಕಳುಹಿಸಿರಲಿಲ್ಲ. ನಮ್ಮ ಮೇಲಾಧಿಕಾರಿಯಾದ ತರೀಕೆರೆ ವಲಯ ಅರಣ್ಯಾಧಿಕಾರಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿ

ಮನೆ ಶೋಧನೆ ಮಾಡುವುದಕ್ಕೆ ತರೀಕೆರೆ ವಲಯ ಅರಣ್ಯಾಧಿಕಾರಿಗಳು ನನ್ನ ಹೆಸರಿಗೆ ಶೋಧನಾ ಪತ್ರ ಎಂ.ಎಸ್. ಪ್ರದೀಪ್, ಉಪವಲಯ ಅರಣ್ಯಾಧಿಕಾರಿ ಇವರ ಕೈಯಲ್ಲಿ ಕಳುಹಿಸಿಕೊಡುವುದರೊಂದಿಗೆ ಹೆಚ್ಚಿನ ಭದ್ರತೆಗಾಗಿ ಸಂಗ್ಯನಾಯ್ಕ, ಮಧು, ರಿಯಾಜ್ ಅಹ್ಮದ್, ಭಾಗವಾನ್, ಪ್ರಶಾಂತ್ ಕುಮಾರ್, ಬಸವರಾಜ್ ನಾಯಕೋಡಿ, ಅರಣ್ಯ ರಕ್ಷಕರನ್ನು ಕಳುಹಿಸಿಕೊಟ್ಟಿರುತ್ತಾರೆ ಎಂದು ನಿಪಿ.2 ಮಹಜರಿನಲ್ಲಿ ನಮೂದಿಸಿಲ್ಲ.

25. ನಡೆದ ಘಟನೆಯನ್ನು ರೂಪಶ್ರೀ ಸ್ಟುಡಿಯೋ ಮಾಲೀಕರಾದ ನಾಗರಾಜ ಇವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಸ್ಥಳಕ್ಕೆ ಕರೆಸಿ ಸದರಿ ಘಟನೆ ಬಗ್ಗೆ ವಿಡಿಯೋ ಚಿತ್ರೀಕರಿಸಿ ಪೋಟೋಗಳನ್ನು ತೆಗೆಯಲಾಯಿತು ಎಂದು ನಿಪಿ.2 ಮಹಜರಿನಲ್ಲಿ ನಮೂದಿಸಿಲ್ಲ.

26. ಮಹಜರನ್ನು ಜರುಗಿಸುವಾಗ 3 ಗಂಟೆಗಳ ಸಮಯ ತಗುಲಿತ್ತು. ನಾವು ಮನೆಯನ್ನು ಶೋಧನೆ ಮಾಡುವಾಗ 1 ನೇ ಆರೋಪಿಗೆ ಸೇರಿದ ವಸ್ತುಗಳು ಅಥವ ದಾಖಲೆಗಳು ಸಿಕ್ಕಿರುವುದಿಲ್ಲ.

27. ದಿಃ 14.12.2016 ರಂದು ನಾನು, ಚಾಸಾ.2 ಮತ್ತು ಚಾಸಾ.3 ರವರು ಸೇರಿ ಖಚಿತ ವರ್ತಮಾನದ ಮೇರೆಗೆ ಲಿಂಗದಹಳ್ಳಿ ಪೆಟ್ರೋಲ್ ಬಂಕ್ ಹತ್ತಿರ ಕಾಯುತ್ತಿದ್ದೆವು, ಆ ದಿನ ಮದ್ಯಾಹ್ನ 1.00 ಗಂಟೆ ಸಮಯಕ್ಕೆ ಚಿಕ್ಕಮಗಳೂರು ಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿರು ವುದನ್ನು ಕಂಡು ನಾವು ನಿಲ್ಲಿಸುವ ಪ್ರಯತ್ನ ಮಾಡಿದೆವು, ಆ ದ್ವಿಚಕ್ರ ವಾಹನದಲ್ಲಿ ಒಬ್ಬ ಚಾಲಕ ಹಿಂಬದಿ ಸವಾರ ಇದ್ದು ನಮ್ಮ ಸೂಚನೆಯನ್ನು ಲೆಕ್ಕಿಸದೆ ತರೀಕೆರೆ ಹೊರಟುಹೋದರು, ಸದರಿ ದ್ವಿಚಕ್ರ ವಾಹನದ ಮದ್ಯೆ ಒಂದು ಬಿಳಿ ಬಣ್ಣದ ಚೀಲ ಕಂಡುಬಂದಿತು, ಸದರಿ ದ್ವಿಚಕ್ರ ವಾಹನದ ನಂಬರು ಕೆಎ-18/ಇಸಿ 3711 ಆಗಿತ್ತು, ನಾವು ಇಲಾಖೆಯ ಜೀಪಿನಲ್ಲಿ ಮೇಲೆ ಹೇಳಿದ ಸದರಿ ದ್ವಿಚಕ್ರ ವಾಹನವನ್ನು ಬೆನ್ನಟ್ಟಿ ತರೀಕೆರೆ ತಾಲ್ಲೂಕಿನ ಕೋಡಿಕ್ಯಾಂಪ್ ಬೋವಿ ಕಾಲೋನಿ ನಾಲ್ಕನೇ ಕ್ರಾಸ್ ಹತ್ತಿರದ ಒಂದು ಮನೆಯ ಹತ್ತಿರ ನಾವು ಬೆನ್ನಟ್ಟಿದ ದ್ವಿಚಕ್ರವಾಹನ ನಿಂತಿತ್ತು, ನಾವು

ಪರಿಶೀಲನೆಗೆ ಮುಂದಾದಾಗ ನಮ್ಮನ್ನು ನೋಡಿ ಇಬ್ಬರು ವ್ಯಕ್ತಿಗಳು ಅಲ್ಲಿಂದ ಓಡಿಹೋದರು, ನಾವು ಅವರನ್ನು ಬೆನ್ನಟ್ಟಿ ಹಿಡಿದುಕೊಂಡೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

28. ಅವರನ್ನು ವಿಚಾರಿಸಿದಾಗ ಅವರು ತಮ್ಮ ಹೆಸರು ಮಂಜು ಮತ್ತು ಮುರುಗೇಶ್ ಇಬ್ಬರು ಹಳೇಗಂಗೂರು ನಿವಾಸಿಗಳು ಎಂದು ತಿಳಿಸಿದರು, ನಾವು ದ್ವಿಚಕ್ರ ವಾಹನದಲ್ಲಿ ಬ್ಯಾಗಿನಲ್ಲಿ ಏನು ತಂದಿದ್ದೀರ ಎಂದು ಕೇಳಿದಾಗ ಅವರು ಗಂಗೂರು ಮೀಸಲು ಅರಣ್ಯದಿಂದ ಶ್ರೀಗಂಧದ ಮರ ಕಡಿದು ತುಂಡುಗಳನ್ನಾಗಿ ಮಾಡಿ 1 ಮತ್ತು 4 ನೇ ಆರೋಪಿತರಿಗೆ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

29. ನಾವು ಹಿಡಿದ 2 ಮತ್ತು 3 ನೇ ಆರೋಪಿತರನ್ನು 1 ಮತ್ತು 4 ನೇ ಆರೋಪಿತರ ಮನೆಯ ಬಳಿ ಕರೆತಂದು ನೋಡಿದಾಗ ಆ ಮನೆಯ ಬಾಗಿಲಿಗೆ ಬೀಗ ಹಾಕಲಾಗಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಚಾರಿಸಿದಾಗ ನಾವು 2 ಮತ್ತು 3 ನೇ ಆರೋಪಿತರನ್ನು ಹಿಡಿಯುವಾಗ 1 ಮತ್ತು 4 ನೇ ಆರೋಪಿತರು ಮನೆಗೆ ಬೀಗ ಹಾಕಿಕೊಂಡು ಓಡಿಹೋಗಿರುವ ವಿಚಾರ ತಿಳಿಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

30. ನಂತರ ಈ ವಿಚಾರವನ್ನು ಚಾಸಾ.14 ರವರಿಗೆ ತಿಳಿಸಿದೆನು, ಚಾಸಾ.14 ರವರು ಚಾಸಾ.6 ರವರ ಮೂಲಕ ಶೋಧನಾ ಪತ್ರವನ್ನು ಕಳುಹಿಸಿದರು, ಚಾಸಾ.4 ರಿಂದ 9 ರವರನ್ನು ಸ್ಥಳದ ಬಂದೋಬಸ್ತಿಗಾಗಿ ಕಳುಹಿಸಿದರು, ನಾವು ಮನೆಯನ್ನು ಸುತ್ತುವರಿದು ಪರಿಶೀಲಿಸಿದಾಗ ಮನೆಯ ಹಿಂದಿನ ಬಾಗಿಲನ್ನು ಭದ್ರಪಡಿಸದೇ ಇರುವುದು ಕಂಡುಬಂತು, ನಾವು ಸದರಿ ಮನೆಯೊಳಗೆ ಪ್ರವೇಶ ಮಾಡಿ ನೋಡಿದಾಗ ಮನೆಯ ಒಂದು ಬೆಡ್ ರೂಮಿಗೆ ಅಳವಡಿಸಿದ ಮರದ ಅಲೆಮಿರಾದಲ್ಲಿ ಬಟ್ಟೆಗಳ ಕೆಳಗಡೆ ಹಲಗೆ ಜೋಡಿಸಿರುವುದು ಕಂಡು ಬಂತು, ಪರಿಶೀಲಿಸಿದಾಗ ಒಂದು ಕಿಂಡಿ ಇದ್ದು,

ಕಿಂಡಿಯಿಂದ ಶ್ರೀಗಂಧದ ಪರಿಮಳ ಬರುತ್ತಿತ್ತು, ಪುನಃ ಪರಿಶೀಲಿಸಿದಾಗ ಅಲ್ಮೆರಾದ ಪಕ್ಕದಲ್ಲಿ ದೇವರ ಕೋಣೆ ಇದ್ದುದು ಕಂಡುಬಂತು, ಪೂಜಾ ರೂಮಿನ ನೆಲದ ಗ್ರಾನೈಟ್ ಪೊಳ್ಳಾಗಿರುವುದು ಕಂಡುಬಂತು, ಅಲ್ಲ ಮತ್ತೊಮ್ಮೆ ಪರಿಶೀಲಿಸಿದಾಗ ಅಲ್ಲೊಂದು ತೊಟ್ಟಿ ಇದ್ದು, ತೊಟ್ಟಿಯಲ್ಲಿ ಶ್ರೀಗಂಧದ ತುಂಡುಗಳು ಮತ್ತು ಕೈಚೀಲಗಳು ಇರುವುದು ಕಂಡುಬಂತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

31. ನಾವು ಚಾಸಾ.9 ರವರನ್ನು ತೊಟ್ಟಿಯೊಳಗೆ ಇಳಿಸಿ ನೋಡಲಾಗಿ ಅದರಲ್ಲಿ ಶ್ರೀಗಂಧದ ಪುಡಿ ಒಂದು ಚೀಲದಲ್ಲಿ ಇದ್ದು, ಶ್ರೀಗಂಧದ ಚಕ್ಕೆಗಳು, ಚಿಪ್ಪುಹಂದಿಯ ಚಿಪ್ಪು ಇತ್ತು, ತೊಟ್ಟಿಯ ಆಳ ಅಂದಾಜು 4 ರಿಂದ 5 ಅಡಿ ಇತ್ತು, ಶ್ರೀಗಂಧದ ಪುಡಿ, ಶ್ರೀಗಂಧದ ಚಕ್ಕೆಗಳು ಹಾಗೂ ಚಿಪ್ಪುಹಂದಿಯ ಚಿಪ್ಪುಗಳನ್ನು ಅಮಾನತು ಪಡಿಸಿಕೊಂಡೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

32. ಮೇಲೆ ಹೇಳಿದ ಸ್ವತ್ತುಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದನ್ನು ಪರಿಗಣಿಸಿ ವಲಯ ಕಚೇರಿಗೆ ಕರೆ ಮಾಡಿ ಎಫ್.ಒ.ಸಿ ನಂಬರು 22/2016-17 ದಿಃ 14.12.2016 ನ್ನು ಪಡೆದುಕೊಂಡೆವು. ಈ ಬಗ್ಗೆ ಪ್ರುವವರದಿ ತಯಾರಿಸಿದೆನು, ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿದೆನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

33. ಮಹಜರು ಕಾಲದಲ್ಲಿ ವಶಪಡಿಸಿಕೊಂಡು ಗಂಧದ ತುಂಡುಗಳು ಹಾಗೂ ಪುಡಿ ಸೇರಿ ಒಟ್ಟು 66 ಕೆಜಿ ಇತ್ತು. ಚಿಪ್ಪುಹಂದಿಯ ಚಿಪ್ಪುಗಳು ಒಟ್ಟು 5.600 ಗ್ರಾಂ ಇತ್ತು. ಹೊರಗಡೆ ದ್ವಿಚಕ್ರವಾಹನದಲ್ಲಿದ್ದ ಚೀಲದ ಮತ್ತು ಮನೆಯ ಒಳಗಡೆ ಇದ್ದ ಶ್ರೀಗಂಧದ ಒಟ್ಟು ತೂಕ ಮೇಲೆ ಹೇಳಿದಂತಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

34. ಎರಡನೇ ಮತ್ತು ಮೂರನೇ ಆರೋಪಿತರು ಮೇಲೆ ಹೇಳಿದ ಸ್ವತ್ತುಗಳನ್ನು ತಾವೇ ತಂದು ಪೂರೈಸಿರುವುದಾಗಿ ಒಪ್ಪಿಕೊಂಡು ಗುರುತಿಸಿರುತ್ತಾರೆ, ಮಹಜರನ್ನು ಸಂಜೆ 4.00 ರಿಂದ ಸಂಜೆ 7.00 ರವರೆಗೆ

ನಿಪಿ.2 ಪಂಚನಾಮೆ ಕ್ರಮ ಜರುಗಿಸಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

35. ಚಾಸಾ.3 ರವರನ್ನು ಮಹಜರು ಮಾಡುವ ಕಾಲದಲ್ಲಿ ವಿಡಿಯೋ ಚಿತ್ರೀಕರಣ ಮಾಡಿ ಭಾವಚಿತ್ರ ಸಂಗ್ರಹಿಸಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

36. 2 ಮತ್ತು 3 ನೇ ಆರೋಪಿತರು ಹಾಗೂ ವಶಪಡಿಸಿಕೊಂಡ ಮುದ್ದೆಮಾಲುಗಳೊಂದಿಗೆ ತರೀಕೆರೆ ವಲಯ ಕಚೇರಿಗೆ ಹಾಜರಾಗಿ ಚಾಸಾ.14 ರವರ ಮುಂದೆ ಹಾಜರುಪಡಿಸಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

37. ದಿಃ 10.01.2017 ರಂದು 2 ಮತ್ತು 3 ನೇ ಆರೋಪಿತರನ್ನು ಚಾಸಾ.14 ರವರು ನ್ಯಾಯಾಲಯದ ಅನುಮತಿ ಪಡೆದು ವಶಕ್ಕೆ ಪಡೆದುಕೊಂಡರು, ನಾನು, ಚಾಸಾ.2, 3, 14 ಹಾಗೂ 2 ಮತ್ತು 3 ನೇ ಆರೋಪಿತರು ಸೇರಿ, ಆರೋಪಿತರು ತೋರಿಸಿದ ಶಾಂತವೇರಿ ಗ್ರಾಮದ ಈಚಲು ಕಟ್ಟೆಯ ಬಲಭಾಗದ ಗಂಗೂರು ಮೀಸಲು ಅರಣ್ಯಕ್ಕೆ ಹೋದೆವು, ಅಲ್ಲಿ ಮೂರು ಶ್ರೀಗಂಧದ ಮರಕಡಿದ ನಿಶಾನೆಗಳನ್ನು 2 ಮತ್ತು 3 ನೇ ಆರೋಪಿತರು ತೋರಿಸಿದರು, ಸ್ಥಳದಲ್ಲಿ ಮಹಜರು ಕ್ರಮ ಜರುಗಿಸಿದೆವು, ಸ್ಥಳದಲ್ಲಿ ಸುಮಾರು ಅರ್ದ ಪುಟದಷ್ಟು ಕಡಿದ ಮರದ ಬುಡ ಇರುವುದು ಕಂಡುಬಂತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

38. ಸ್ಥಳಲ್ಲಿ ಮಹಜರನ್ನು ಮದ್ಯಾಹ್ನ 2.30 ರಿಂದ 3.30 ರವರೆಗೆ ಮಾಡಿದೆವು. ಮರವನ್ನು ಗರಗಸ ಮತ್ತು ಕತ್ತಿಯಿಂದ ಕತ್ತರಿಸಿರುವುದಾಗಿ 2 ಮತ್ತು 3 ನೇ ಆರೋಪಿತರು ತಿಳಿಸಿದರು, ಶ್ರೀಗಂಧದ ಕಡಿದ ಮರದ ಬುಡ ಇರುವ ಸ್ಥಳದಿಂದ ಸುಮಾರು 50 ಮೀಟರ್ ದೂರದಲ್ಲಿ ಪೊದೆಯಲ್ಲಿ ಬಚ್ಚಿಟ್ಟಿದ್ದ ಕತ್ತಿ ಮತ್ತು ಗರಗಸವನ್ನು ಆರೋಪಿತರು ತೋರಿಸಿದ ಹಾಜರುಪಡಿಸಿದಂತೆ ಅಮಾನತುಪಡಿಸಿಕೊಂಡೆವು, ಅವುಗಳ ಮೇಲೆ

ಎಫ್.ಓ.ಸಿ. ನಂಬರು ನಮೂದಿಸಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

39. ಈ ಬಗ್ಗೆ ಸ್ಥಳದಲ್ಲಿ ಅಮಾನತು ವರದಿ ತಯಾರಿಸಿ, 2 ಮತ್ತು 3 ನೇ ಆರೋಪಿತರನ್ನು ವಾಪಾಸ್ಸು ಕಚೇರಿಗೆ ಕರೆತಂದೆವು ಮತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

40. ಚಾಸಾ.4 ಸಂಗ್ಯಾನಾಯ್ಕ ನನ್ನ ಸಹೋದ್ಯೋಗಿ. ಚಾಸಾ.4 ಮತ್ತು 1 ನೇ ಆರೋಪಿ ನಡುವೆ ಸಿವಿಲ್ ವ್ಯಾಜ್ಯ ಇದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ.4 ರವರ ಮಾತಿನ ಮೇರೆಗೆ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 4 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಕೆ.ಎಸ್.ಎಸ್.ಪಿ. ವಕೀಲರಿಂದ 3 ನೇ ಆರೋಪಿ ಪರವಾಗಿಃ</u>

41. ಮಾಹಿತಿ ಬಂದಾಗ ನಾನು ಲಿಂಗದಹಳ್ಳಿಯ ವಸತಿ ಗೃಹದಲ್ಲಿದ್ದೆ. ನಮ್ಮ ಸಿಬ್ಬಂದಿಗಳು ಕೂಡ ಆ ಸಮಯದಲ್ಲಿ ನನ್ನ ವಸತಿ ಗೃಹದಲ್ಲಿ ಟಪಾಟಲಿಗೆ ಸಂಬಂಧಿಸಿದ ಕೆಲಸ ನಿರ್ವಹಿಸುತ್ತಿದ್ದರು. ನನಗೆ ಮಾಹಿತಿ ಬಂದಾಗ ಬೆಳಿಗ್ಗೆ ಸುಮಾರು 11.30 ಗಂಟೆಯಾಗಿತ್ತು. ಮಾಹಿತಿ ಪೋನ್ ಮೂಲಕ ಬಂದಿತ್ತು. ನಾವು ಲಿಂಗದಹಳ್ಳಿ ಪೆಟ್ರೋಲ್ ಬಂಕ್ ಬಳಿ ಹೋದಾಗ 1.00 ಗಂಟೆಯಾಗಿತ್ತು. ನಮ್ಮ ವಸತಿಗೃಹದಿಂದ ಲಿಂಗದಹಳ್ಳಿ ಪೆಟ್ರೋಲ್ ಬಂಕ್ 3 ಕಿಮೀ ದೂರಇದೆ. 5 ನಿಮಿಷದಲ್ಲಿ ನಾವು ಲಿಂಗದಹಳ್ಳಿ ಪೆಟ್ರೋಲ್ ಬಂಕ್ ಗೆ ಹೋಗಬಹುದು.

42. ನಮ್ಮ ಕಚೇರಿಯಿಂದ ಜೀಪು ಕಳುಹಿಸುವವರೆಗೂ ನಾವು ವಸತಿಗೃಹದಲ್ಲಿದ್ದೆವು. ತರೀಕೆರೆ ರಸ್ತೆಯಲ್ಲಿ ಕಾವಲು ಇಡುವಂತೆ ನಾನು ಕೇಳಿರಲಿಲ್ಲ. ಮದ್ಯಾಹ್ನ ಸಮಯದಲ್ಲಿ ಗಂಗೂರಿನಿಂದ ತರೀಕೆರೆ ಕಡೆಗೆ ಮುದ್ದೆಮಾಲು ಸಾಗಾಟ ಆಗುತ್ತದೆ ಎಂಬ ಮಾಹಿತಿ ಬಂದಿತ್ತು. ನಾವು

ಗಂಗೂರು ಕಡೆಗೆ ಹೋಗಲು ಪ್ರಯತ್ನಿಸಿರಲಿಲ್ಲ. ನಮ್ಮ ಸ್ವಂತ ವಾಹನದಲ್ಲಿ ಹೋಗಲು ಪ್ರಯತ್ನಿಸಲಿಲ್ಲ. ನಾವು ವಾಹನವನ್ನು ರಸ್ತೆಯ ಬದಿಗೆ ನಿಲ್ಲಿಸಿ ಕಾಯುತ್ತಿದ್ದೆವು. ಬ್ಯಾರಿಕೇಡ್ ಅಳವಡಿಸಿರಲಿಲ್ಲ. ನಾವು ನಿಂತ ಸ್ಥಳದಿಂದ ಲಿಂಗದಹಳ್ಳಿ ಬಸ್ ಸ್ಟಾಪ್ 3 ಕಿಮಿ ದೂರ ಇದೆ. ಸದರಿ ಪೆಟ್ರೋಲ್ ಬಂಕ ಹೆಸರು ಗೊತ್ತಿಲ್ಲ. ಪೆಟ್ರೋಲ್ ಬಂಕನವರನ್ನು ಸಾಕ್ಷಿಯಾಗಿ ಪರಿಗಣಿಸುವಂತೆ ಕರೆದಿಲ್ಲ.

43. ಅಂದು ನಾವು ನಿಂತಾಗ ಪಾಸಾದ ವಾಹನಗಳನ್ನು ಲೆಕ್ಕಹಾಕಿಲ್ಲ. ನಾವು ಬೇರೆ ಬೇರೆ ವಾಹನಗಳನ್ನು ಅಂದು ಪರಿಶೀಲಿಸಿಲ್ಲ. ನಾವು ಜೀಪಿನಿಂದ ಸ್ವಲ್ಪ ದೂರದಲ್ಲಿ ರಸ್ತೆಯ ಎಡ ಮತ್ತು ಬಲಭಾಗಕ್ಕೆ ನಿಂತಿದ್ದೆವು. ಯಾರು ಯಾರು ಎಲ್ಲೆಲ್ಲಿ ನಿಂತಿದ್ದೆವು ಎಂದು ಹೇಳಲಾಗುವುದಿಲ್ಲ. ನಾವು ರಸ್ತೆಗೆ ಅಡ್ಡವಾಗಿ ಕೈಸನ್ನೆ ಮಾಡಿದಾಗಲೂ ಆರೋಪಿತರು ತಮ್ಮ ಬೈಕನ್ನು ಮುಂದೆ ಚಲಿಸಿಕೊಂಡು ಹೋದರು. ನಮ್ಮ ಹಾಗೂ ಆರೋಪಿತರ ವಾಹನದ ಮದ್ಯೆ 200 ಮೀಟರ್ ಅಂತರ ಇತ್ತು. ನಾವು ತರೀಕೆರೆ ಕಚೇರಿಗೆ ಬೈಕ್ ನಿಲ್ಲಿಸದೆ ಹೋಗಿದ್ದಾರೆ ಆ ಕಡೆಯಿಂದ ಬನ್ನಿ ಎಂದು ಹೇಳಿರಲಿಲ್ಲ. ಹಾಗೇ ಹೇಳಲು ತೊಂದರೆ ಇರಲಿಲ್ಲ.

44. ಮೂರನೇ ಆರೋಪಿ ಬೈಕನ್ನು ಓಡಿಸುತ್ತಿದ್ದ, 2 ನೇ ಆರೋಪಿ ಹಿಂದೆ ಕುಳಿತಿದ್ದ. ಈ ವಿಚಾರವನ್ನು ಪಂಚನಾಮೆಯಲ್ಲಿ ನಮೂದಿಸಿಲ್ಲ. ಸುಮಾರು 15 ನಿಮಿಷ ನಾವು ಬೈಕನ್ನು ಬೆನ್ನಟ್ಟಿದ್ದೆವು. ಬೈಕು ನಮ್ಮ ಕಣ್ಣಳತೆಯಲ್ಲಿತ್ತು. ಬೈಕು ನಿಲ್ಲಿಸಿ ಕೋಡಿಕ್ಯಾಂಪ್ ಕಡೆಗೆ ಓಡಿಹೋದರು. ನಾವು ಮೂವರು ಸಿಬ್ಬಂದಿ ಅವರನ್ನು 200 ಮೀಟರ್ ಬೆನ್ನಟ್ಟಿದೆವು. ಈ ವಿಚಾರವನ್ನು ಮಹಜರಿನಲ್ಲಿ ಮತ್ತು ದೂರಿನಲ್ಲಿ ನಮೂದಿಸಿಲ್ಲ. ಆ ಸಮಯದಲ್ಲಿ ಸ್ಥಳೀಯರನ್ನು ಕರೆದಿಲ್ಲ. ಸ್ಥಳೀಯರಿಗೆ ಪಂಚನಾಮೆಗೆ ಸಹಕರಿಸುವಂತೆ ನೋಟೀಸು ನೀಡಿಲ್ಲ. ಸಹಕರಿಸದವರ ವಿರುದ್ಧ ಕಾನೂನು ಕ್ರಮ ಜರುಗಿಸಿಲ್ಲ. ಚಾಸಾ.14 ರವರು ಸ್ಥಳಕ್ಕೆ ಆ ಕ್ಷಣದಲ್ಲಿ ಬಂದಿರಲಿಲ್ಲ. ಚಾಸಾ.14 ರವರು ಸ್ಥಳಕ್ಕೆ ಬಂದ ಸಮಯ ಹೇಳ

ಲಾಗುವುದಿಲ್ಲ. ನಾವು ದಾಳಿ ಮಾಡಿದ ಮನೆಯಲ್ಲಿ ಎಷ್ಟು ಕೊಠಡಿಗಳಿದ್ದವು ಯಾರೆಲ್ಲ ವಾಸವಾಗಿದ್ದಾರೆ ಎಂದು ನಾವು ಪಂಚನಾಮೆಯಲ್ಲಿ ನಮೂದಿಸಿಲ್ಲ.

45. ಬೈಕಿನಲ್ಲಿದ್ದ ಬ್ಯಾಗನ್ನು ನಾವು ಪ್ರತ್ಯೇಕವಾಗಿ ತೂಕ ಮಾಡಿಲ್ಲ. ಬೈಕಿನಲ್ಲಿದ್ದ ಬ್ಯಾಗನ್ನು ಪ್ರತ್ಯೇಕವಾಗಿ ತೂಕ ಮಾಡಲು ತೊಂದರೆ ಇರಲಿಲ್ಲ. ಬೈಕಿನಲ್ಲಿದ್ದ ಸ್ವತ್ತಿನ ಅಳತೆ ಹೇಳಲಾಗುವುದಿಲ್ಲ. ಮು.ಮಾ.1 ರ ಅಂದಾಜು ವಯಸ್ಸು ನನಗೆ ಹೇಳಲಾಗುವುದಿಲ್ಲ. ಮು.ಮಾ.1 ರಿಂದ 4 ರ ಸ್ವತ್ತುಗಳನು ಎಲ್ಲಿಂದ ತಂದು ಸಂಗ್ರಹಿಸಿದರು ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ. 2 ಮತ್ತು 3 ನೇ ಆರೋಪಿತರನ್ನು ವಿಚಾರಿಸಿ ಮುದ್ದೆಮಾಲುಗಳನ್ನು ಎಲ್ಲಿಂದ ತಂದರು ಎಂದು ಹೇಳಿಕೆ ಪಡೆದಿಲ್ಲ.

46. ಮು.ಮಾ.1 ರಲ್ಲಿ ಶ್ರೀಗಂಧದ ಪರಿಮಳ ಇಲ್ಲ ಎಂದರೆ ಸರಿಯಲ್ಲ. ಬೈಕಿನ ಮೇಲಿದ್ದ ಚೀಲವನ್ನು ಪ್ರತ್ಯೇಕವಾಗಿ ಗುರುತಿಸಿಲ್ಲ. ನಾವು ಮುದ್ದೆಮಾಲು ಅಮಾನತುಪಡಿಸಿಕೊಂಡು ತರೀಕೆರೆ ಕಚೇರಿಗೆ ಹೋದೆವು. ಮುದ್ದೆಮಾಲುಗಳನ್ನು ಪ್ರತ್ಯೇಕವಾಗಿ ತೂಕ ಮಾಡಿಲ್ಲ. ಪ್ರತ್ಯೇಕವಾಗಿ ತೂಕ ಮಾಡಲು ತೊಂದರೆ ಇರಲಿಲ್ಲ. ಆರೋಪಿತರನ್ನು ಸಾಕ್ಷಿದಾರರ ಸಮಕ್ಷಮ ಮೌಖಿಕವಾಗಿ ವಿಚಾರಿಸಿರಲಿಲ್ಲ.

47. ದಿಃ 10.01.2017 ರಂದು ತನಿಖಾಧಿಕಾರಿ ಆರೋಪಿತರನು ವಶಕ್ಕೆ ಪಡೆದು ಮುಂದುವರೆದು ತನಿಖೆ ನಡೆಸುವಾಗ ನಾನು ಹಾಜರಿದ್ದೆ. ಯಾವ ಕಾರಣಕ್ಕೆ ಆರೋಪಿತರನ್ನು ಪಡೆದು ತನಿಖೆ ಮುಂದುವರೆಸಲು ವಿಳಂಬವಾಗಿದೆ ಎಂದುನನಗೆ ಹೇಳಲಾಗುವುದಿಲ್ಲ. ನಮಗೆ ಆರೋಪಿತರನ್ನು ಕೋಡಿಕ್ಯಾಂಪ್ ನಿಂದ ನಿಪಿ.8 ಮಹಜರು ಬರೆದ ಸ್ಥಳಕ್ಕೆ ಕರೆದುಕೊಂಡು ಹೋಗಲು ತೊಂದರೆ ಇರಲಿಲ್ಲ. ನಿಪಿ.9 ರ ಮಹಜರು ಬರೆದ ಸ್ಥಳ ರಸ್ತೆಯಿಂದ ಸುಮಾರು 300 ಮೀಟರ್ ಒಳಗಡೆ ಇದೆ. ಆ ಸಮಯದಲ್ಲಿ ಸ್ವತಂತ್ರ ಸಾಕ್ಷಿದಾರರು ಇರಲಿಲ್ಲ. ಸ್ವತಂತ್ರ ಸಾಕ್ಷಿದಾರರನ್ನು ಕರೆಸುವ

ಪ್ರಯತ್ನ ಮಾಡಿದೆವು. ಪಂಚನಾಮೆಯಲ್ಲಿ ಲ್ಯಾಂಡ್ ಮಾರ್ಕ ಗುರುತಿಸಿ ರುವುದಿಲ್ಲ.

48. ನಿಪಿ.6 ರಿಂದ 8, 10 ಮತ್ತು 11 ರ ಭಾವಚಿತ್ರಗಳಲ್ಲಿ ದಿನಾಂಕ ಮತ್ತು ಸಮಯ ನಮೂದಿಲ್ಲ. ನಿಸಿ.1 ಭಾವಚಿತ್ರ ಈ ಕೇಸಿಗೆ ಸಂಬಂಧಿಸಿದ್ದಲ್ಲ. ನಿಸಿ.1 ಭಾವಚಿತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ಪಂಚನಾಮೆ ಬರೆದ ನಂತರ ಪ್ರವವ ಸಲ್ಲಿಸಲಾಯಿತು. ಪ್ರವವ ಸಲ್ಲಿಸ್ದಾಗ ಸಮಯ ಸಂಜೆ 7.00 ಗಂಟೆಯಾಗಿರಬಹುದು. ಪ್ರವವ ಯಲ್ಲಿ ಎಲ್ಲಾ ವಿವರ ನಮೂದಿಸಿದ್ದೇವೆ. ಪುನಃ ಹೇಳುತ್ತೇನೆ ಪ್ರವವ ಯಲ್ಲಿ ಮುದ್ದೆಮಾಲುಗಳ ವಿವರ ಪೂರ್ಣವಾಗಿ ಬರೆದಿಲ್ಲ. ಸಂಪೂರ್ಣ ವಿವರ ಬರೆಯಲು ತೊಂದರೆ ಇರಲಿಲ್ಲ. ಪ್ರವವ ಯಲ್ಲಿ ಸಮಯ ನಮೂದಿಸಿಲ್ಲ.

49. ಇಲಾಖೆ ವಾಹನದ ಸಂಖ್ಯೆಯನ್ನು ಮಹಜರಿನಲ್ಲಿ ನಮೂದಿಸಿಲ್ಲ. 2 ಮತ್ತು 3 ನೇ ಆರೋಪಿತರನ್ನು ಬೈನ್ನಟ್ಟಿ ಹಿಡಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯ ಮನೆಯ ಒಳಗಡೆ ಚೀಲವನ್ನು ತೆಗೆದುಕೊಂಡು ಹೋದರು ಎಂದು ಮತ್ತು ಮುದ್ದೆಮಾಲುಗಳನ್ನು ನಿಪಿ.2 ರಡಿಯಲ್ಲಿ ಅಮಾನತುಪಡಿಸಿಕೊಂಡೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಹಳೆಯ ಸ್ವತ್ತುಗಳನ್ನು ಉಪಯೋಗಿಸಿಕೊಂಡು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟಿ ಸವಾಲುಃ ಶ್ರೀ.ಐ.ಎಸ್.ಟಿ.. ವಕೀಲರಿಂದ 4 ನೇ ಆರೋಪಿ ಪರವಾಗಿಃ</u>

50. ಕೋಡಿಕ್ಯಾಂಪಿನಲ್ಲಿ ನಾನು 1 ಮತ್ತು 4 ನೇ ಆರೋಪಿತರನ್ನು ನೋಡಿರಲಿಲ್ಲ. ನಾವು ದಾಳಿ ಮಾಡಿದ ಮನೆ 1 ಮತ್ತು 4 ನೇ ಆರೋಪಿತರಿಗೆ

ಸೇರಿದ್ದು ಎಂದು ಅಕ್ಕಪಕ್ಕದವರನ್ನು ಕೇಳಿ ಮತ್ತು ದಸ್ತಗಿರಿಯಾದ ಆರೋಪಿತರನ್ನು ಕೇಳಿ ತಿಳಿದುಕೊಂಡೆವು. ಸರ್ಚ ವಾರೆಂಟ್‌ನ್ನು ಯಾವ ಮನೆಯನ್ನು ಸರ್ಚ ಮಾಡಲು ನೀಡಲಾಗಿದೆ ಎಂದು ಹೇಳಲಾಗುವುದಿಲ್ಲ. ಸರ್ಚ ವಾರೆಂಟಿನಲ್ಲಿ ನನ್ನ ಸಹಿ ಇಲ್ಲ. ಸರ್ಚ ವಾರೆಂಟ್ ನೀಡುವಂತೆ ನಾನು ಲಿಖಿತ ಮನವಿ ಸಲ್ಲಿಸಲಿಲ್ಲ. ನಾನು ಪೋನು ಮಾಡಿದ ಸುಮಾರು 20 ನಿಮಿಷದಲ್ಲಿ ಸರ್ಚ ವಾರೆಂಟ್ ಸ್ಥಳಕ್ಕೆ ಬಂದಿತ್ತು. ನಾನು ಅಲ್ಲಿ ನಿಂತಷ್ಟು ಸಮಯವೂ ಸರ್ಚ ಮಾಡಿದ ಮನೆಗೆ ಬೀಗ ಹಾಕಿತ್ತು.

51. ಸರ್ಚ ವಾರೆಂಟನ್ನು ಮನೆಯಲ್ಲಿ ಇರುವವರಿಗೆ ತೋರಿಸಿ ಜಾರಿಗೊಳಿಸಬೇಕು ಎಂದು ಗೊತ್ತು. ಯಾರು ಇಲ್ಲದ ಮನೆಗೆ ಪ್ರವೇಶ ಮಾಡಿ ಸರ್ಚ ಮಾಡತಕ್ಕದ್ದು ಎಂದು ನನಗೆ ಆದೇಶ ಇರಲಿಲ್ಲ. ನಾವು ಮನೆಯ ಒಳಗೆ ಪ್ರವೇಶ ಮಾಡಿ ಮುದ್ದೆಮಾಲುಗಳನ್ನು ಅಮಾನತುಪಡಿಸಿ ಕೊಳ್ಳುವವರೆಗೂ ಆ ಮನೆಗೆ ನಮ್ಮನ್ನು ಹೊರತುಪಡಿಸಿ ಬೇರೆ ಯಾರೂ ಪ್ರವೇಶ ಮಾಡಿರಲಿಲ್ಲ.

52. ನಾನು ತನಿಖಾಧಿಕಾರಿಗಳ ಮುಂದೆ 1 ಮತ್ತು 4 ನೇ ಆರೋಪಿತರು ಮನೆಗೆ ಬೀಗ ಹಾಕಿ ಓಡಿಹೋಗಿರುತ್ತಾರೆಂದು ಹೇಳಿಕೆ ನೀಡಿರುವುದಿಲ್ಲ. ನಾನು ತನಿಖೆಯನ್ನು ಮುಂದಿನ ಅಧಿಕಾರಿಗೆ ಹಸ್ತಾಂತರಿಸುವವರೆಗೂ ಮನೆಗೆ ಸಂಬಂಧಿಸಿದ ದಾಖಲೆ ನೋಡಿರುವುದಿಲ್ಲ. 1 ಮತ್ತು 4 ನೇ ಆರೋಪಿತರಿಗೆ ಸಂಬಂಧಿಸಿದ ವಸ್ತುಗಳನ್ನು ದಾಳಿ ಮಾಡಿದ ಮನೆಯಲ್ಲಿಯೇ ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಯಾವುದೇ ತನಿಖೆಯನ್ನು ಈ ಪ್ರಕರಣದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. 1 ಮತ್ತು 4 ನೇ ಆರೋಪಿಗೂ ಮುದ್ದೆಮಾಲುಗಳಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಉಳಿದಂತೆ **1** ಮತ್ತು **3** ನೇ ಆರೋಪಿ ಪರ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ.

ಮರು ವಿಚಾರಣೆ: ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಮಂಜುನಾಥ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ